# ಎರಡು 'ಸಾರಟಿಪ್ಪಣಿಗಳು'

ಡಾ. ಸಿ.ಪಿ. ಕೆ.

## ೧. ಸ್ವಾಮಿ ವಿವೇಕಾನಂದರ ಪ್ರಕಾರ, 'ಶ್ರೀರಾಮಕೃಷ್ಣ ಸಾರ'



ಶ್ರೀರಾಮಕೃಷ್ಣ ಪರಮಹಂಸರ ನೇರ ಶಿಷ್ಯರಾದ ಅಕ್ಷಯಕುಮಾರ್ ಸೇನ್ ಎಂಬುವರು ಪರಮಹಂಸರನ್ನು ಕುರಿತು ಬಂಗಾಳಿಯಲ್ಲಿ 'ಶ್ರೀರಾಮಕೃಷ್ಣ ಪುಂಥಿ' (ಇಂಗ್ಲೀಷ್ ಅನುವಾದ 'A Portrait of Sri Ramakrishna') ಎಂಬ ಮಹಾಕಾವ್ಯವನ್ನು ರಚಿಸಿದ್ದಾರೆ. ಅದರ ಬಗೆಗೆ ಬರೆಯುತ್ತ ಸ್ವಾಮಿ ವಿವೇಕಾನಂದರು ಹೀಗೆ ಹೇಳಿದ್ದಾರೆ:

''(೧) ವೇದ ವೇದಾಂತಗಳೂ ಇತರ ಎಲ್ಲ ಅವತಾರಗಳೂ ಹಿಂದೆ ಏನೇನು ಮಾಡಿವೆಯೋ ಅದನ್ನೆಲ್ಲ ಶ್ರೀರಾಮಕೃಷ್ಣರು ಏಕೈಕ ಜೀವನದಲ್ಲಿ ಆಚರಿಸಿ ಬದುಕಿದರು. (೨) ಅವರ ಬದುಕನ್ನು ಅರ್ಥಮಾಡಿಕೊಳ್ಳದೆ ವೇದ, ವೇದಾಂತ ಅವತಾರ ಇತ್ಯಾದಿಗಳನ್ನು ಯಾರೂ ಅರ್ಥಮಾಡಿಕೊಳ್ಳಲಾರರು. ಏಕೆಂದರೆ, ಅವರು ಅವುಗಳ ಭಾಷ್ಯವಾಗಿದ್ದರು. (೩) ಅವರು ಹುಟ್ಟಿದ ದಿನದಿಂದಲೇ 'ಸತ್ಯಯುಗ' ಪ್ರಾರಂಭವಾಯಿತು. ಅಂದಿನಿಂದ, ಎಲ್ಲ ಬಗೆಯ ಭೇದಗಳು ಕೊನೆಗೊಂಡಿವೆ; ಚಂಡಾಲನವರೆಗೆ ಪ್ರತಿಯೊಬ್ಬರೂ ದೈವೀ ಪ್ರೇಮದಲ್ಲಿ ಭಾಗಿಗಳಾಗಿದ್ದಾರೆ. ಗಂಡು-ಹೆಣ್ಣಿನ, ಧನಿಕ-ದರಿದ್ರರ, ಅಕ್ಷರಸ್ಥ-ಅನರಕ್ಷರಸ್ಥರ, ಬ್ರಾಹ್ಮಣ-ಚಂಡಾಲರ ನಡುವಣ ಭೇದದ ಮೂಲೋತ್ಪಾಟನಕ್ಕಾಗಿ ಅವರು ಬಾಳಿದರು. ಅವರು ಶಾಂತಿಯ ಹರಿಕಾರರಾಗಿದ್ದರು. ಹಿಂದೂ-ಮುಸ್ಲಿಮರ, ಹಿಂದೂ-ಕ್ರೈಸ್ತರ ಪ್ರತ್ಯೇಕತೆ ಈಗ ಗತಕಾಲೀನ ಸಂಗತಿ. ಹಿಂದಿದ್ದ ಭೇದ ಸಂಬಂಧವಾದ ಘರ್ಷಣೆ ಗತಯುಗಕ್ಕೆ ಸೇರಿದ್ದು. ಈ ಸತ್ಯಯುಗದಲ್ಲಿ ಶ್ರೀರಾಮಕೃಷ್ಣರ ಪ್ರೇಮದ ಮಹಾತರಂಗ ಎಲ್ಲರನ್ನೂ ಒಂದು ಗೂಡಿಸಿದೆ.''

ಇಲ್ಲಿ ಶ್ರೀರಾಮಕೃಷ್ಣರ ಸಾಧನೆಯನ್ನೆಲ್ಲ ಕೆಲವೇ ಮಾತುಗಳಲ್ಲಿ ಸಂಗ್ರಹಿಸಿಲ್ಲವೆ, ವಿವೇಕಾನಂದರು? ಮುಂದುವರಿದು ಅವರು ಹೇಳುತ್ತಾರೆ: ''ಯಾರೇ ಆಗಲಿ, - ಗಂಡಾಗಲಿ ಹೆಣ್ಣಾಗಲಿ, ಮೇಲಾಗಲಿ ಕೀಳಾಗಲಿ — ಶ್ರೀರಾಮಕೃಷ್ಣರನ್ನು ಪೂಜಿಸುವವರು ಅತ್ಯುನ್ನತವಾದುದಾಗಿ ಪರಿವರ್ತನೆಗೊಳ್ಳುತ್ತಾರೆ. ಮತ್ತೊಂದು ವಿಷಯ: ಭಗವಂತನ ಮಾತೃತ್ವ ಈ ಅವತಾರದಲ್ಲಿ ಪ್ರಧಾನ - ಅವರು ಸ್ತ್ರೀಯಂತೆ ವಸ್ತ್ರಧರಿಸುತ್ತಿದ್ದರು; ನಮ್ಮ ಮಾತೆಯೇ ಆಗಿದ್ದರು ; ಅಂತೆಯೇ ನಾವು ಎಲ್ಲ ಸ್ತ್ರೀಯರನ್ನೂ ಮಾತೆಯ ಪ್ರತಿಬಿಂಬಗಳಾಗಿ ಕಾಣಬೇಕು. ಭಾರತದಲ್ಲಿ ಎರಡು ಅನಿಷ್ಟಗಳಿವೆ; ಸ್ತ್ರೀಯರ ತುಳಿತ ಮತ್ತು ಜಾತಿ ಪರಿಮಿತಿಗಳಿಂದ ದರಿದ್ರರ ದಮನ. ಶ್ರೀರಾಮಕೃಷ್ಣರು ಸ್ತ್ರೀಯರ, ಜನಸಾಮಾನ್ಯರ, ಎಲ್ಲರ — ಉತ್ಕೃಷ್ಟ, ನಿಕೃಷ್ಟರ - ಉದ್ಧಾರಕರಾಗಿದ್ದರು.''

## ೨. ಗಿರೀಶ್‌ಚಂದ್ರಘೋಷರ ಪ್ರಕಾರ: ''ಸ್ವಾಮಿ ವಿವೇಕಾನಂದರ ಸಾರ.''



''ಸ್ವಾಮೀಜಿ ವರ್ಣನೆಗೆ ಅತೀತರು. ಜಗತ್ತನ್ನೇ ಅವರು ಜಯಿಸಿದರು. ನಿರ್ವಿಕಲ್ಪ ಸಮಾಧಿ ಅವರ ಅಂಗೈ ಮೇಲಿತ್ತು. ಆದರೆ ಮನುಕುಲದ ಒಳಿತಿಗಾಗಿ ಅವರನ್ನು ಕೆಲಸದಲ್ಲಿ ತೊಡಗಿಸಿದವರು ಶ್ರೀರಾಮಕೃಷ್ಣರು.

''ಶ್ರೀರಾಮಕೃಷ್ಣರ ಉಪದೇಶಗಳನ್ನು ಸ್ವಾಮೀಜಿ ಪ್ರಸಾರ ಮಾಡಿದರು. ನಾವು ಹರಡಿದ ಭಾವನೆಗಳ ಮೂಲಕರ್ತೃ ತಾವೆಂಬ ಆಲೋಚನೆಯನ್ನು ಲೇಶಮಾತ್ರವೂ ಇಟ್ಟುಕೊಳ್ಳದೆ, ಒಮ್ಮೆ ಅವರು ಹೇಳಿದರು: 'ಶ್ರೀರಾಮಕೃಷ್ಣರ ಹೆಸರನ್ನು ಜಪಿಸಿದವರು ಮೃತ್ಯುವಿಗೆ ಹೆದರಬೇಕಿಲ್ಲ!'

''ರಾಮಕೃಷ್ಣರ ಶಿಷ್ಯರು ಸಂಪೂರ್ಣ ಶುದ್ಧರಾಗಿರಬೇಕೆಂದು ಅವರು ಬಯಸಿದರು. ಸ್ವಾಮೀಜಿ ತಮಸ್ಸಿನಲ್ಲಿ ಮುಳುಗಿದವರಲ್ಲಿ ರಜಸ್ಸನ್ನು ಎಚ್ಚರಿಸಿದರು, ಭಗವದ್ಗೀತೆಯಲ್ಲಿ ಕೃಷ್ಣ ಅರ್ಜುನನ ವಿಷಯದಲ್ಲಿ ಮಾಡಿದಂತೆ.

'' 'ಗುರುದೇವರ ಸೇವೆಯಲ್ಲಿ ನಾನು ಈ ಕ್ಷಣವೆ ಪ್ರಾಣತ್ಯಾಗಕ್ಕೂ ಸಿದ್ಧನಿದ್ದೇನೆ' ಎಂದು ಅವರು ನುಡಿದರು. ಶ್ರೀರಾಮಕೃಷ್ಣರ ಆಧ್ಯಾತ್ಮಿಕ ಸಂದೇಶದಿಂದ ಇಡೀ ಜಗತ್ತು ಲಾಭಗೊಳ್ಳುವಂತೆ, ಅವರು ಗುರುದೇವನ ಬೋಧನೆಗಳನ್ನು ತಮ್ಮ ಮಾತು, ಕೃತಿಗಳಿಂದ ಪ್ರಸಾರ ಮಾಡಲು ದುಡಿದರು.

''ಸ್ವಾಮಿ ವಿವೇಕಾನಂದರು ಶ್ರೀರಾಮಕೃಷ್ಣರಿಂದ ಭಿನ್ನ ಅಥವಾ ಪ್ರತ್ಯೇಕ ಎಂದು ಭಾವಿಸುವವರನ್ನು ನಾನು ಮೂಢರೆಂದು ಕರೆಯುತ್ತೇನೆ!''